ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ -19

5ನೇ ವರ್ಷ 4ನೇ ಸಂಚಿಕೆ ಕೊಪ್ಪ 17-9-1936 ಭಾನುವಾರ ಬೆಲೆ 40 ಪೈಸೆ

ಮಲೆನಾಡಲ್ಲಿ ಕ್ಷೀರೋದ್ಯಮದ ಸರ್ವತೋಮುಖ ಅಭಿವೃದ್ಧಿಗೆ ದೃಢ ಸಂಕಲ್ಪದ ಹೆಜ್ಜೆ

ಕೊಪ್ಪ : ಕ್ಷೀರೋದ್ಯಮದ ಸರ್ವತೋಮುಖ ಅಭಿವೃದ್ಧಿಗೆ ಹವಾನುಕೂಲ ಅತ್ಯುತ್ತಮವಾಗಿದೆಯೆನ್ನಲಾಗಿರುವ ಮಲೆನಾಡಿನಲ್ಲಿ ಇಂಥ ಅಭಿವೃದ್ಧಿಯುಕ್ತ ಮೊದಲ ಸ್ಪಷ್ಟ ಹೆಜ್ಜೆಗಳನ್ನು ಇಡಲಾಗಿದೆ.

ಕೊಪ್ಪ, ಹರಿಹರಪುರಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಕ್ರಮಬದ್ಧವಾಗಿ ನೋಂದಾಯಿಸಲಾಗಿದ್ದು, ಅವುಗಳ ಪ್ರಥಮ ಸರ್ವಸದಸ್ಯರ ಸಭೆಗಳು ಸೆ. 17ರಂದು ನಡೆದು ಕಾರ್ಯಕಾರಿ ಮಂಡಳಿಗಳನ್ನು ಆರಿಸಲಾಗಿದೆ. ಶೃಂಗೇರಿಯಲ್ಲಿ ಇಷ್ಟರಲ್ಲೇ ಸಂಘ ಸ್ಥಾಪನೆಯಾಗಲಿದೆ. ಅಲ್ಲದೆ ಈಗಾಗಲೇ ಇದ್ದ ಬಿಳಾಲುಕೊಪ್ಪ, ಮತ್ತಿತರ ಕಡೆಗಳ ಸಂಘಗಳನ್ನೂ ಪುನರೂಪಿಸಲಾಗಿದೆ.

ಇದೇ ದಿನ ಬಾಳೆಹೊನ್ನೂರಿನಲ್ಲಿ ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಡೈರಿ ಅಭಿವೃದ್ಧಿ ನಿಗಮದ ಉನ್ನತ ಅಧಿಕಾರಿಗಳು, ಈ ಪ್ರದೇಶದ ಪಶು ವೈದ್ಯಾಧಿಕಾರಿಗಳು ಮತ್ತಿತರ ಸಂಬಂಧಪಟ್ಟ ಇಲಾಖೆಗಳ ಹಾಗೂ ಬ್ಯಾಂಕುಗಳ ಅಧಿಕಾರಿಗಳು, ರೈತರು, ಹಾಲು ಉತ್ಪಾದಕರು ಹಾಗೂ ಹಾಲು ಉತ್ಪಾದಕರ ಸಂಘಗಳ ಪ್ರತಿನಿಧಿಗಳ ಸಭೆ ನಡೆದು, ಮಲೆನಾಡಿನಲ್ಲಿ ಕ್ಷೀರೋದ್ಯಮವನ್ನು ವ್ಯವಸ್ಥಿತವಾಗಿ ಬೆಳೆಸುವ ಬಗ್ಗೆ ವ್ಯಾಪಕವಾಗಿ ಚರ್ಚಿಸಲಾಯಿತು.

ದಿನವೂ ಎರಡು ಹೊತ್ತೂ ಹಾಲು ಸಂಗ್ರಹಣೆಯ ವಾಹನ ಕೊಪ್ಪ, ಹರಿಹರಪುರ, ಶೃಂಗೇರಿ, ಜಯಪುರ, ಬಸರೀಕಟ್ಟೆ ಮಾರ್ಗವಾಗಿ ಬಾಳೆಹೊನ್ನೂರಿನ ಹಾಲು ಶೈತ್ಯೀಕರಣ ಘಟಕಕ್ಕೆ ಹಾಲು ಸಾಗಿಸುವಂತೆ ಇಷ್ಟರಲ್ಲೇ ಏರ್ಪಾಡಾಗಲಿದೆ. ಇದರ ಜೊತೆಯಲ್ಲೇ, ಹಾಲಿನ ಗುಣಪಟ್ಟ ಪರೀಕ್ಷೆಯಲ್ಲಿ ನಡೆಯುತ್ತಿತ್ತೆನ್ನಲಾದ (ಡೈರಿ ಮಟ್ಟದಲ್ಲಿ) ಅಕ್ರಮಗಳನ್ನು ತಡೆಗಟ್ಟುವುದು, ಸಕಾಲದಲ್ಲಿ ಹಣ ಪಾವತಿ ಮುಂತಾದವುಗಳ ಬಗ್ಗೆ ಸಹ ಕ್ರಮ ಕೈಗೊಳ್ಳಲು ನಿರ್ಣಯಿಸಲಾಗಿದೆ.

ಹಾಗೆಯೇ, ಬ್ಯಾಂಕುಗಳು ಈ ಸಹಕಾರ ಸಂಘಗಳ ಮೂಲಕ ಹಾಲು ಉತ್ಪಾದಕರು, ಹೊಸದಾಗಿ ಉತ್ತಮ ತಳಿಯ ಹಸುಗಳನ್ನು ಹಾಗೂ ಪಶು ಆಹಾರವನ್ನು ಕೊಳ್ಳಲು ಸಾಲ ಸೌಲಭ್ಯಗಳನ್ನು ನೀಡುವಂತೆ ವ್ಯವಸ್ಥೆ ಮಾಡುವ ಬಗ್ಗೆ ಸಹ ಖಚಿತ ಭರವಸೆ ನೀಡಲಾಗಿದೆ.

4 ವರ್ಷಗಳ ಹಿಂದೆ ಪೊಡ್ಡ ದೊಡ್ಡ ಮಾತುಗಳ, ಅಬ್ಬರದ ಪ್ರಚಾರದ, ಅವ್ಯವಸ್ಥಿತ 'ಯೋಜನೆ'ಗಳ ಮೂಲಕ ಆರಂಭಿಸಲ್ಪಟ್ಟು ಅಷ್ಟೇ ಚಿಂತಾಜನಕವಾಗಿ ಮುರುಟಿ ಹೋಗುವ ಸ್ಥಿತಿಯಲ್ಲಿದ್ದ ಮಲೆನಾಡು ಕ್ಷೀರೋದ್ಯಮ ಇನ್ನಾದರೂ ಪುನರುಜ್ಜೀವನಗೊಂಡು, ಈ ಪ್ರದೇಶದ ವಿಪುಲ ನೈಸರ್ಗಿಕ ಅವಕಾಶಗಳನ್ನೆಲ್ಲ ಸದುಪಯೋಗ ಪಡಿಸಿಕೊಂಡು ವ್ಯವಸ್ಥಿತವಾಗಿ ಸರ್ವತೋಮುಖವಾಗಿ ಬೆಳೆಯುತ್ತದೆಂದು ಹಾರೈಸಲಾಗಿದೆ.

'ಮುಂಜಾವು' ತನ್ನ 27-4-86ರ ಸಂಚಿಕೆಯಲ್ಲಿ ಪ್ರಕಟಿಸಿದ, ಎಂ. ಆರ್. ಕಣ್ಣನ್‌ರವರ "ಮಲೆನಾಡಿನ ಜನಜೀವನ ಕೈ ಜೇನ ತುಂಬಬಲ್ಲ ಹೈನುಗಾರಿಕೆ ಪ್ರಗತಿಗೆ ಹಾಸನ ಡೈರಿ ಅಧಿಕಾರಿಗಳ ಅಡ್ಡಗಾಲು?" ಎಂಬ ವರದಿಯು ಜಾಡಿನಲ್ಲಿ ಮಂತ್ರಿ ಗೋವಿಂದಗೌಡರು ಡೈರಿ ನಿಗಮದ 'ಬೆನ್ನುಹತ್ತಿ'ದ ಪರಿಣಾಮವಾಗಿ ಈವರೆಗಿನ ಬೆಳವಣಿಗೆಗಳು, ಆಗಿವೆಯೆನ್ನಲಾಗಿದ್ದು, ಇದು ಹೀಗೆಯೇ ಮುಂದುವರಿದು ಸಂಪೂರ್ಣ ಫಲ ಕಾಣುತ್ತದೆಂದು 'ಮುಂಜಾವು' ಆಶಿಸುತ್ತದೆ.

ರಾಜ್ಯ ಕ್ರೀಡಾಕೂಟಕ್ಕೆ ಇ. ಮಲ್ಲಿಕಾ ಆಯ್ಕೆ

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ 8ನೇ ತರಗತಿ ವಿದ್ಯಾರ್ಥಿನಿ ಇ. ಮಲ್ಲಿಕಾ ಈ ಬಾರಿ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ 800 ಮೀ. ಓಟವನ್ನು 2 ನಿ. 36 ಸೆಕೆಂಡ್‌ಗಳಲ್ಲಿ ಪೂರೈಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ ಅಲ್ಲದೇ ಸೆ. 1ರಂದು ನಡೆದ ಜಿಲ್ಲಾ ಮಟ್ಟದ ದಸರಾ ಕೂಟದಲ್ಲಿ 400 ಮೀ. ಹಾಗೂ 200 ಮೀ. ಓಟಗಳಲ್ಲಿ ಪ್ರಥಮ ಸ್ಥಾನಗಳಿಸಿ, ವಿಭಾಗ ಮಟ್ಟದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾಳೆ. ಇದೇ ಶಾಲೆಯ ವಿದ್ಯಾರ್ಥಿ, ಬಾಳಗಡಿಯ ಮಂಜುನಾಥ ಶೆಟ್ಟಿ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾನೆ.

ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೊಪ್ಪದ ಉದಯೋನ್ಮುಖ ಕ್ರೀಡಾಪಟು ಜೆ. ಎಸ್. ಗೀತಾಳ ಪ್ರತಿಭೆ ಬೆಳಕಿಗೆ ಬರಲು ಕಾರಣರಾದ ಆಕೆಯ ಅಣ್ಣ ಜಲಂಧರ್ ಅವರೇ ಮಲ್ಲಿಕಾಳನ್ನು ತರಬೇತುಗೊಳಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಪ್ರತಿಭಟನೆ

ಕೊಪ್ಪ: ವೆಂಕಟಸ್ವಾಮಿ ಆಯೋಗದ ವರದಿಯ ವಿರುದ್ಧ ಇಲ್ಲಿನ ಪ್ರ. ದ. ಕಾಲೇಜು ವಿದ್ಯಾರ್ಥಿಗಳು ಸೆ 5ರಂದು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟಿಸಿದರು. ಹಾವನೂರ್ ವರದಿಯ ಪ್ರಕಾರ ಶಿಫಾರಸುಗಳನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ಒತ್ತಾಯಿಸುವ ಮನವಿಯೊಂದನ್ನು ತಹಸೀಲ್ದಾರರಿಗೆ ಸಲ್ಲಿಸಿದರು.

ಶೃಂಗೇರಿಯಲ್ಲಿ

ಇಲ್ಲಿನ ಜೆ. ಸಿ. ಬಿ.ಎಂ. ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳು ವರದಿಯ ವಿರುದ್ಧ ಊರಿನಲ್ಲಿ ಶಾಂತಿಯುತ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸ್ಥಳೀಯ ಹೋಟೆಲ್‌ಗಳಲ್ಲಿನ ದುಬಾರಿ ಬೆಲೆಗಳನ್ನು ತಗ್ಗಿಸಬೇಕು ಹಾಗೂ ಶುಚಿಯಾಗಿಡಬೇಕು, ಚಿತ್ರಮಂದಿರದಲ್ಲೂ ಬೆಲೆ ತಗ್ಗಿಸುವುದಲ್ಲದೆ ಆಸನ ವ್ಯವಸ್ಥೆ ಸರಿಯಾಗಿ ಮಾಡಬೇಕು, ಕಾಲೇಜಿಗೆ ಹೋಗುವ ಅತಿ ಹತ್ತಿರದ ಕುರುಬಗೇರಿ ರಸ್ತೆಯಲ್ಲಿರುವ ಮಾಂಸ, ಸಾರಾಯಿ ಅಂಗಡಿಗಳನ್ನು ತೆಗೆಸಿ ರಸ್ತೆಯನ್ನೂ ರಿಪೇರಿ ಮಾಡಿಸಿ ಕೊಡಬೇಕು ಎಂಬ ಬಗ್ಗೆ ಸಹ ಒತ್ತಾಯಿಸಿದರು.

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಜಿಲ್ಲಾ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದ ಸಿದ್ಧತೆಗೆ ಕ್ರೀಡಾಭಿಮಾನಿಗಳ ಸಭೆ

ಕೊಪ್ಪ: ಈ ಸಾಲಿನ ಜಿಲ್ಲಾ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವನ್ನು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ನಡೆಸಲು ಯೋಜಿಸಲಾಗಿದ್ದು, ಈ ಕ್ರೀಡಾಕೂಟದ ಸಂಘಟನೆಗಾಗಿ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಸಲಹೆಗಳನ್ನು ಪಡೆಯಲು ತಾ|| 19-9-86ನೇ ಶುಕ್ರವಾರ ಸಂಜೆ 4 ಗಂಟೆಗೆ ಏರ್ಪಡಿಸಲಾಗಿರುವ ಸಭೆಗೆ ಪಟ್ಟಣದ ಎಲ್ಲ ಕ್ರೀಡಾಭಿಮಾನಿಗಳೂ ಹಾಜರಾಗಿ ಸಹಕಾರ ನೀಡಬೇಕೆಂದು ಪ್ರಿನ್ಸಿಪಾಲರು ಕೋರಿದ್ದಾರೆ.

ದಯಾನಂದ ಕಲ್ಲೆಯವರ ನಿಧನಕ್ಕೆ ಶೋಕ

ಕೊಪ್ಪ: ಸೆ. 8ರಂದು ಹಠಾತ್ ನಿಧನ ಹೊಂದಿದ ಮಾಜಿ ಶಾಸಕ ದಯಾನಂದ ಆರ್. ಕಲ್ಲೆಯವರಿಗೆ ಕುದುರೆಗುಂಡಿಯ ವಿನಾಯಕ ಯುವಕ ಸಂಘದ ಆಶ್ರಯದಲ್ಲಿ ಸೆ. 9ರಂದು ಶ್ರದ್ಧಾಂಜಲಿ ಅರ್ಪಿಸಲಾಯಿತು.

ಡಾ|| ಯು. ಜನಾರ್ದನ ಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ. ವಿಜಯ ಅಜಿಲ, ಹೆಚ್. ಎಸ್. ಲಿಂಗಪ್ಪ ಗೌಡ, ಶೇಷಾದ್ರಿ ಭಟ್, ಶಾಸನ ಚಂದ್ರಶೇಖರ್ ಎಚ್. ಎಸ್. ಕೃಷ್ಣ ಕುಮಾರ್ ಮುಂತಾದವರು ಮೃತರ ಗುಣಗಾನ ಮಾಡಿ, ಅವರ ಆತ್ಮಕ್ಕೆ ಚಿರಶಾಂತಿ ಕೋರಿದರು.

ಕೊಪ್ಪದಲ್ಲಿ

ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ಜನತಾ ಪಕ್ಷದ ಕಾರ್ಯಕರ್ತರು ಮತ್ತು ದಿ|| ಕಲ್ಲೆಯವರ ಹಿತೈಷಿಗಳೂ ಅಭಿಮಾನಿಗಳೂ ಸಭೆ ಸೇರಿ ದಿವಂಗತ ಕಲ್ಲೆಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಗೋವಿಂದ ಗೌಡರು ಕಲ್ಲೆಯವರ ರಾಜಕೀಯ ಪ್ರಾಮಾಣಿಕತೆ ಮತ್ತು ತತ್ವನಿಷ್ಠೆಗಳನ್ನು ಸ್ಮರಿಸಿ, ಅವರ ಜನಾಂಗವು ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಿದೆ ಎಂದು ಶೋಕ ವ್ಯಕ್ತಪಡಿಸಿದರು.

ಶ್ರೀಮತಿ ಜಾನಕಿ ನಾಗರಾಜ್, ಬಿ.ಜಿ. ಚಂದ್ರಶೇಖರ್, ಹರೀಶ್, ಅಣ್ಣೇಗೌಡ ಮುಂತಾದವರು ಮೃತರ ಗುಣಗಾನ ಮಾಡಿದರು. ಎಚ್. ಎಸ್. ಕಳಸಪ್ಪ ಸ್ವಾಗತಿಸಿ ಎಂ.ಸಿ. ಸತೀಶ್ ವಂದಿಸಿದರು.

ಕ್ಷೇತ್ರದಲ್ಲಿ ಭತ್ತದ ಧಾರಣೆ

ಭತ್ತಗಳು	ಕ್ವಿಂಟಾಲಿಗೆ
ಗೌರಿಸಣ್ಣ	ರೂ. 250.00
ಇಂಟಾನ್	ರೂ. 240.00
ಕೊಯಿಮತ್ತೂರು	ರೂ. 240.00

ಕೆಲಸದ ಒತ್ತಡದಿಂದಾಗಿ ನಮ್ಮ 7-9-86ರ ಸಂಚಿಕೆ ಪ್ರಕಟವಾಗಲಿಲ್ಲ.

—ಸಂ

ಸರಕಾರೀ 'ಕೆಲಸ'ದ ಹೆಸರಲ್ಲಿ, ಬೊಕ್ಕಸದ ಖರ್ಚಿನಲ್ಲಿ, ಪರಿವಾರ ಸಮೇತರಾಗಿ

'ವೀಐಪಿ'ಗಳ ದುಬಾರಿ ತೀರ್ಥಯಾತ್ರೆಗಳು

ಸರ್ಕಾರದ ಕೆಲಸಕ್ಕೆ ಎಂದು ದಾಖಲೆಗಳಲ್ಲಿ ತೋರಿಸಿ, ಸಂಸಾರ ಸಮೇತರಾಗಿ ಸರ್ಕಾರಿ ಖರ್ಚಿನಲ್ಲಿ ಶೃಂಗೇರಿಯ ೀರ್ಥಯಾತ್ರೆಗೆ ಬರುವ ಸರ್ಕಾರದ ಸಣ್ಣ-ದೊಡ್ಡ ಅಧಿಕಾರಿ ಗಣ ಒಂದು ಕಡೆಯಾದರೆ, ಇದೇ ರೀತಿಯಲ್ಲಿ ಬರುವ ಾಜ್ಯ-ಕೇಂದ್ರ ಸರ್ಕಾರಗಳ ದೊಡ್ಡ ದೊಡ್ಡ "ವೀಐಪಿ"ಗಳದೇ ಒಂದು ದೊಡ್ಡ ಕತೆ. ಇವರುಗಳಿಂದ ಸರ್ಕಾರದ ಬೊಕ್ಕ ಕ್ಕೆ ನೇರವಾಗಿ ತಗಲುವ ಖರ್ಚು ಒಂದು ಪಾಲಾದರೆ, ಇವರ ರಕ್ಷಣೆ-ಭದ್ರತೆಗೆ, ಊಟೋಪಚಾರ-ಭೋಜು-ಮೋಜವಾ) ಇತ್ಯಾದಿಗಳಿಗೆ ಅಂತ ಪರೋಕ್ಷವಾಗಿ ಸರ್ಕಾರಕ್ಕೆ ತಗಲುವ ಖರ್ಚು ಹತ್ತು ಪಾಲು! ಸಾಲದ್ದಕ್ಕೆ ಇವರುಗಳ ಸೇವೆಗಾಗಿ ವಿವಿಧ ಪ್ರಮುಖ ಇಲಾಖೆಗಳೆಲ್ಲ ಟೊಂಕ ಕಟ್ಟಿ ನಿಲ್ಲುವುದರಿಂದ ಜನ ಸಾಮಾನ್ಯರ ಕೆಲಸಗಳು ಅಷ್ಟಷ್ಟು ದಿನ ಸ್ಥಗಿತಗೊ ಳ್ಳುವುದು, ಸಂಚಾರ-ಸಾರಿಗೆ ವ್ಯವಸ್ಥೆಗಳು ಅಸ್ತವ್ಯಸ್ತವಾಗುವುದು ಇತ್ಯಾದಿ ಉಪ-ದುಷ್ಪರಿಣಾಮಗಳಂತೂ ಲೆಕ್ಕಕ್ಕೇ ಸಿಕ್ಕದಷ್ಟು.

ಹಗಲು ದರೋಡೆಯಂಥ ಈ ಅನ್ಯಾಯದ ಸರಮಾಲೆಯ ಮೇಲೆ ಒಂದು 'ಕ್ಷ'-ಕಿರಣ ಈ ಲೇಖನಮಾಲೆ.

ಸಮೀ'ಕ್ಷ'ಕ : ಕಲ್ಕುಳಿ ವಿಠಲ ಹೆಗ್ಡೆ

ನಮ್ಮದು ಹೇಳಿ ಕೇಳಿ ಬಂಡವಾಳಶಾಹಿ ವ್ಯವಸ್ಥೆಯನ್ನು ನೆಚ್ಚಿಕೊಂಡಿರುವ ದೇಶ. ಇಂಥಲ್ಲಿ ಮನುಷ್ಯ-ಮನುಷ್ಯರ ನಡುವೆ ಜಗಜಾಂತರ. ಇಲ್ಲಿ '....ಉಂಡೋನೆ ಜಾಣ'. ಇತ್ತ ಒಂದು ವರ್ಗದ ಜನ ದುಡಿ ದೂ ಉಣ್ಣೋಕಿಲ್ದೆ-ಉಡೋಕಿಲ್ದೆ ನಷ್ಟಳೀ ದ್ರೆ, ಅತ್ತ ಯಾವ ಯಾವ ರೂಪದಲ್ಲಾ ದರೂ ಸಿಕ್ಕಿದ್ದನೆಲ್ಲಾ ಸಿಕ್ಕಿದಷ್ಟನ್ನೆಲ್ಲಾ ಬಾಚಿ ಬಾಚಿ ಮಜಾ ಉಡಾಯಿಸೋ ಶ್ರೀಮಂತ). ಅವರ ಅಪ್ಪಂದಿರಾದ ರಾಜಕಾರಣಿಗಳ ಪಿ ಇನ್ನೂ ನಯವಾದ ಮೋಸ. ದೇಶದ ಐಕ್ಯತೆ, ಸಮಗ್ರತೆ, ಸಮಾಜವಾದ.... ಅಂತ ಸೆಕ್ರೆಟರಿ ಕೈಲಿ ಬರೆಸಿ ಉರು ಹೆಚ್ಚಿ ಕೊಂಡು ಭಾಷಣ ಬಿಗಿದು, ಸಮ ಸಮಾಜ ಬಂದ್ಕೊಂತಲೇ ಸಮಾ ಮಜ ಉಡಾಯಿ ಸುವಾಗ ಇನ್ನಷ್ಟು ಬೇಕು, ಮತ್ತಷ್ಟು ಬೇ ಕು. ಆಗ ಇದ್ದಕ್ಕಿದ್ದಂತೆ "ನಾವೊಂದು ದಿನ ಸಾಯ್ತೀವಲ್ಲ" ಎಂದೇನಾದರೂ ಜ್ಞಾಪಕ ಬಂದರೆ ಭಯ ಬಿದ್ದು, ದೇವರು-ದಿಂಡರು, ತೀರ್ಥ-ಯಾತ್ರೆ, ಸ್ವಾಮಿ-ಬಾಬಾ ಅಂ ತ್ಕೋತ ಅಂಥವರ ಕಾಲು ಕಟ್ಕೋದು ಇ ತ್ತೀಚೆಂದು ಮಾಮೂಲು ಸಂಗತಿ. ಆದ್ದರಿಂದ ಲೇ ಇವರುಗಳಿಗೂ ಈ ಮಠ-ಸ್ವಾಮಿ-ಬಾಬಾಗಳಿಗೂ ನೇರವಾದ ನಂಟು!

ಇಷ್ಟೆಲ್ಲ ಪೀಠಿಕೆ ಯಾಕೆಂದರೆ 'ಪುಣ್ಯ ಕ್ಷೇತ್ರ'ವಾದ ನಮ್ಮ ಶೃಂಗೇರಿಗೆ ಕನಿಷ್ಠ ಪಕ್ಷ ತಿಂಗಳು-ಮೂರು ತಿಂಗಳಿಗಾದರೂ ಒಬ್ಬೊಬ್ಬ ಇಂಥ ದೊಡ್ಡ ಮನುಷ್ಯ ಬರದೇ ಇರೊಲ್ಲ. ಅಂಥ ಸಮಯದಲ್ಲೆಲ್ಲ, ಅದರಲ್ಲೂ ರಾಜಕೀಯ ಅಥವಾ ಉನ್ನತಾಧಿಕಾರದ ದೊಡ್ಡ ಮನುಷ್ಯ ಬಂದು ಹೋಗೋದೂಂ ದ್ರೆ, ಆಗ ನಡೆಯುವ ದುಂದು ವೆಚ್ಚ ಕಂ ಡು-ಹೊಟ್ಟೆಗೆ ಕೂಳಿಲ್ಲದ, ಆಸೆ ಇದ್ದೂ ಅವಕಾಶವಿಲ್ಲದ ಜನ ಸಾಮಾನ್ಯರು, ರೈತ ರು ಅಂಗಡಿ-ಹೋಟೇಲು ಬಾಗಿಲಲ್ಲಿ ನಿಂತು ಕರುಗೋದು ನೋಡಿದರೆ ಹೃದಯ ಹಿಂ ಡುತ್ತೆ.

ಇಂಥವರು ಹೀಗೆ ಆಗಾಗ್ಗೆ ಒಬ್ಬೊಬ್ಬ ರು ಬಂದು ಹೋಗೋದೂಂದ್ರೆ ಶೃಂಗೇರಿ ಜನ ಕ್ಕೆ ಒಂಥರಾ ಲಾಭಾನೇ. ನಮ್ಮ ಹೆಚ್ಚಿನ ಜನ ಶ್ರೀಮಂತರ ಮೋಜು ನೋಡಿ ಕನಸು ಕಂಡು ಖುಷಿ ಪಡುವವರೇ ಆದ್ರಿಂದ, ಹಿಂ ದಕ್ಕಷ್ಟು, ಮುಂದಕ್ಕಷ್ಟು ಕಾರು-ಜೀಪು ಗಳ ಮಧ್ಯೆ, ಎಲ್ಲದರಿಂದ ರಕ್ಷಿತವಾದ ಉದ್ದು ದ್ದ ಕಾರುಗಳಲ್ಲಿ, ಬಲಗೈಲಿ ಚುಟ್ಟ ಹಿಡಿದು ಎಡಗೈ ಹೆಂಡತಿ ಹೆಗಲ ಮೇಲೆ ಹಾಕ್ಕೊಂ ಡು ಠೀವಿ-ಶೇಂಕಾರಗಳಿಂದ, ರಸ್ತೆ ಬದಿ ನಿಂತು ಬೆರಗುಗಣ್ಣುಗಳಿಂದ ನೋಡುತ್ತ ನಿಂತ ಬಡಪಾಯಿಗಳನ್ನು ಕಂಡು ಸೈರನ್ ಕೂಗಿಸುತ್ತ ಹೋಗುವ ಮಜ ನೋಡಿ ನಮಗೂ ಒಂಥರ ಖುಷಿಯೇ !

ರಾಜ್ಯದ ದೊಡ್ಡವರೆಲ್ಲ ಹೀಗೆ ಕಾರಲ್ಲಿ ಬಂದರೆ, ಕೇಂದ್ರದವರದ್ದೆಲ್ಲ ಹೆಲಿಕಾಪ್ಟರ್ ಸವಾರಿಯೇ. ಬರೀ ಅವರ ಹಾಸಿಗೆ ಬಟ್ಟೆ, ಪರಿವಾರ ಇವನ್ನು ಸಾಗಿಸೋಕೇ ಅವು ನಾ ಲ್ಕಾರು ಸಾರಿ ಬಂದು ಹೋಗುವಾಗ, ಗಾಳಿ ಯಲ್ಲಿ ಹಾರೋ ವಿಮಾನಗಳನ್ನು ಕಾಲು ಬುಡದಲ್ಲೇ ಕೇವಲ ನೂರಿನ್ನೂರು ಅಡಿ ದೂರದಲ್ಲಿ ನೋಡೋ ಭಾಗ್ಯ ಶೃಂಗೇರಿಗ ರಿಗೆ!

ಹೀಗೆ ನಾವೇನೋ ನಮ್ಮ ನಮ್ಮ ಖುಷಿ ಯಲ್ಲಿದ್ದರೆ, ಸಂಬಂಧಪಟ್ಟ ಇಲಾಖೆಗಳವರ ಪಾಡನ್ನೂ ಸ್ವಲ್ಪ ಯೋಚಿಸಬೇಕಲ್ಲ? ಅದ ರಲ್ಲಿ ಈ ಪೋಲೀಸ್ನೋರ ಗೋಳಂತೂ ಶತ್ರು ಗೂ ಬೇಡ. ಜಡಿಮಳೆ ಹೊಡೀತಿರಲಿ, ಟಾರ್ ರಸ್ತೆ ಸುಡುತಿರಲಿ; ಆ ಮಹಾನು ಭಾವ ಬರೋ 2-3 ದಿನ ಪರ್ಯಂತ ರಸ್ತೆ ಗಳನ್ನು ಕಾದುಕೊಂಡಿರಬೇಕು; ಮಾಮೂ ಲಾಗಿ ತಿರುಗೋ ವಾಹನಗಳನ್ನ 'ದಿಕ್ಕು ತ ಪ್ಪಿಸಿ, ಓಡಾಡೋ ಜನಕ್ಕೆ ತೊಂದರೆ ಕೊ ಟ್ಟು ಅವರೆಲ್ಲ ಮಕ್ಕಳು-ಮರಿ, ಸಾಮಾನು-ಸರಂಜಾಮು ಸಮೇತ ಸುತ್ತಿ ಬಳಸಿಯೋ ಅಥವಾ ರಿಕ್ಷಾಕ್ಕೆ ದಂಡ ತೆತ್ತೋ ಸಾಗ ಬೇಕು; ನಿಂತ ಕಾಲಲ್ಲೇ ದಿನವೆಲ್ಲ ನಿಂತೋ ಅಥವಾ ರಸ್ತೆಲಿರೋ ನಾಯಿ-ದನ ಎಲ್ಲಾ ಓಡಿಸಿಯೋ ಬೇಜಾರಾಯಿತು ಅಂತ 'ಮೂ ಡ್' ಬದಲಿಸಿಕೊಳ್ಳಲು ಒಂದು ಘಳಿಗೆ ಸಿಗ ರೇಟ್ ಅಂಗಡಿಯಲ್ಲೋ ಎಣ್ಣೆ ಅಂಗಡಿಯ ಲ್ಲೋ ವಿಶ್ರಾಂತಿ ಪಡೆಯುವಂತಿಲ್ಲ, ನಿಮಿಷ ಕ್ಕೊಬ್ಬ ಮೇಲಧಿಕಾರಿ ಬರುತ್ತಿರುತ್ತಾರೆ. ಪೋಲೀಸರನ್ನು ಕಂಡು ದ್ವೇಷ ಕಾರೋ ಜನ ಕೂಡ, "ಈ ಗೋಳು ಯಾರಿಗೂ ಬ್ಯಾಡಪ್ಪ. ಕೂಲಿ ಮಾಡಿದರೂ ಈ ಗೋ ಳಿಲ್ಲ" ಅನ್ನುವಷ್ಟಾಗಿರುತ್ತದೆ.

"....ಹೌದು ಸ್ವಾಮಿ, ಲಂಚ ತಗೋಬಾರ್ದು, ಪ್ರಾಮಾಣಿಕರಾಗಿರ್ಬೇಕು. ಎಲ್ಲಾ ಸರಿ. ಆದರೆ, ಆಫೀಸ್ ಇನ್‌ಸ್ಪೆಕ್ಷನ್ನೂ, ಅದೂ-ಇದೂ ಅಂತ ನಮ್ಮ ಇದ್ದ ಬದ್ದ ಅಧಿಕಾರಿಗಳೆಲ್ಲ ಈ ಪುಣ್ಯಕ್ಷೇತ್ರ ಯಾತ್ರೆಗೆ ತಮ್ಮ ತಮ್ಮ ಸಂಸಾರ-ಪರಿವಾರಗಳ ಸಮೇತ ಬರ್ತಾರಲ್ಲ. ಅವರನ್ನೆಲ್ಲ ನಾವೇ 'ನೋಡ್ಕೋ'ಬೇಕಲ್ಲ. ಅದಕ್ಕೆ ಎಷ್ಟು ಖರ್ಚಾಗುತ್ತೆ? ಇದನ್ನೆಲ್ಲ ಎಲ್ಲಿಂದ ಭರಿಸೋದು? ನಮಗೂ ಸಂಸಾರ, ಮಕ್ಳು-ಮರಿ ಅಂತ ಇಲ್ವೆ?...."

ಉದಯ್ ಹುತ್ತಿನಗದ್ದೆ

—ಒಂದು ಕಿರು ಪರಿಚಯ

ಕೊಪ್ಪಾ ತಾಲ್ಲೂಕು ಹೇರೂರು ಗ್ರಾಮ ದ ಹುತ್ತಿನಗದ್ದೆ ಸಿಂಗಪ್ಪಯ್ಯನವರ ಮಗ ಉದಯ್ ಕನ್ನಡ ಚಿತ್ರ 'ಆರಂಭ'ದ ನಾ ಯಕ ನಟ.

ಈ ಚಿತ್ರದ ನಿರ್ಮಾಣದ ಪಾಲುದಾರ ರೂ ಆಗಿರುವ ಉದಯ್ ಚುರುಕಿನ ಹುಡು ಗ, ಕರಾಟೆ ಪಟು ಕೂಡ. ಬೆಂಗಳೂರಿನಲ್ಲಿ ಫೋಟೋ ಕಲರ್ ಲ್ಯಾಬ್ ನಡೆಸುತ್ತಿರುವ ಉದಯ್ ಬಹುಮುಖ ಪ್ರತಿಭಾವಂತ. ಸ್ನೇಹ ಜೀವಿ, ಸುಂದರ ಯುವಕ ಉದಯ್ ಚಿತ್ರರಂಗಕ್ಕೆ ಬಿ. ಕೆ. ಸುಮಿತ್ರ ಅವರಂತೆ ಮಲೆನಾಡಿನ ಇನ್ನೊಂದು ಹೆಮ್ಮೆಯ ಕೊ ಡುಗೆ.

ಸುಂದರನಾಥ ಸುವರ್ಣ ಅವರ ನಿರ್ದೇಶ ನದ 'ಆರಂಭ' ಸದ್ಯದಲ್ಲೇ ತೆರೆಗೆ ಬರಲಿದೆ.

—ಹು. ವಾ ಶ್ರೀವತ್ಸ

ಈಚೆಗೆ ಶೃಂಗೇರಿಗೆ ಭೇಟಿ ಕೊಟ್ಟಿದ್ದ ವೀ ಐಪಿಯೊಬ್ಬರ ಭದ್ರತೆಗಾಗಿ ಬೇಗಾರು ರಸ್ತೆಯಲ್ಲಿ ಪೋಲೀಸ್ ಸಿಪಾಯಿಯೊಬ್ಬರು ಕಾವಲು ನಿಂತಿದ್ದಾಗ, ಅನಿರೀಕ್ಷಿತವಾಗಿ ಮಳೆ ಬಂತು. ಅವರ ಬಳಿ ಛತ್ರಿಯಾಗಲಿ, ಮಳೆ ಕೋಟಾಗಲಿ ಇರಲಿಲ್ಲ. ಹೋಗಲಿ, ಸ್ವಲ್ಪ ಹೊತ್ತು ನೆರಳಿಗೆ ನಿಲ್ಲೋಣವೆಂದರೆ ಒಂದು ಮರವಾದರೂ ಹತ್ತಿರದಲ್ಲೆಲ್ಲೂ ಇರ ಲಿಲ್ಲ (ಗದ್ದೆ ಬಯಲ ಮಧ್ಯದ ರಸ್ತೆ). ಪಾಪ, ಆತ 'ಧೋ' ಎಂದು ಸುರಿಯೋ ಮಳೇಲಿ ಇಡೀ ತೊಪ್ಪೆಯಾಗಿ ನಿಂತಿದ್ದನ್ನು, ಬೇರಾ ವುದೋ ಉದ್ದೇಶಕ್ಕೆ ಈ ಭಾಗಕ್ಕೆ ಭೇಟಿ ಕೊಟ್ಟಿದ್ದ ರಾಜ್ಯ ಮಟ್ಟದ ಪತ್ರಕರ್ತರ ಒಂ ದು ತಂಡದವರು ಕಂಡು, ಮರುಗಿಕೊಂಡು ಹೋದರು

ಇವರುಗಳ ಪಡಿಪಾಟಲಿನ ಇಂಥ ಎಷ್ಟು ಉದಾಹರಣೆಗಳೋ! (3ನೇ ಪುಟಕ್ಕೆ)

ಓದುಗರ ಪತ್ರ

ಮಾನ್ಯರೆ,

ನಿಮ್ಮ ತಾರೀಕು 24-8-1986ರ ಸಂಚಿಕೆಯಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳು ಮತ್ತು ಡಿ. ಸಿ. ಸಿ. ಬ್ಯಾಂಕ್ ನಡುವಿನ ವಿರಸ ಎಂಬ ವಿಚಾರವಾಗಿ ಪ್ರಕಟವಾದ ಓದುಗರ ಪತ್ರಕ್ಕೆ ಈ ಕೆಳಕಂಡ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇವೆ.

ವ್ಯವಸಾಯ ಸೇವಾ ಸಹಕಾರ ಸಂಘಗಳ ಆಡಳಿತ ನೋಡಿಕೊಳ್ಳುವ ಚುನಾಯಿತ ಆಡಳಿತ ಮಂಡಳಿಗಳ ಅಧಿಕಾರ ವ್ಯಾಪ್ತಿಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಾಗಲೀ ಅಥವಾ ಸಿ. ಸಿ. ಎ. ಆಗಲೀ ಹಸ್ತಕ್ಷೇಪ ಮಾಡುತ್ತಿಲ್ಲ ಮತ್ತು ಮಾಡುವ ಹಾಗೂ ಇಲ್ಲ.

ಸಿ.ಸಿ.ಎ. ಹೊಸದಾಗಿ ರಚಿತವಾದುದಲ್ಲ ಇದು 1976ರಲ್ಲಿಯೇ ಸರ್ಕಾರದಿಂದ ನಿಯೋಜಿಸಲ್ಪಟ್ಟದ್ದು. ಕೆಲವು ಸಹಕಾರ

ಸಿ.ಸಿ.ಎ. : ಸಹಕಾರ ಸಂಘ-ಡಿ.ಸಿ.ಸಿ. ಬ್ಯಾಂಕ್ ಮಧ್ಯೆ
ವಿರಸಕ್ಕಲ್ಲ, ಸಮರ್ಪಕ ಕಾರ್ಯ ನಿರ್ವಹಣೆಗಾಗಿ

ಸಂಘಗಳು ಸಿ.ಸಿ.ಎ. ಬಗ್ಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದ ತಡೆಯಾಜ್ಞೆ ತಂದಿದ್ದರಿಂದ ಹಾಗೆಯೇ ಇದ್ದಿತು. ಕಳೆದ ವರ್ಷ ನ್ಯಾಯಾಲಯದ ತಡೆ ಆಜ್ಞೆ ತೆರವಾದ್ದರಿಂದ ಮಾರ್ಚ್ 1985ರಿಂದ ಸಹಕಾರ ಸಂಘಗಳ ನಿಬಂಧಕರ ಆಜ್ಞೆ ಮೇರೆ ಸಿ.ಸಿ.ಎ. ಅನ್ನು ಬ್ಯಾಂಕಿಗೆ ಪುನಃ ಅಳವಡಿಸಿಕೊಳ್ಳಲಾಗಿದೆ. ಸಿ.ಸಿ.ಎ. ರಚಿಸುವ ಮೊದಲು ಸರ್ಕಾರ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿದ್ದು, ಕೆಲವು ಸಹಕಾರ ಸಂಘಗಳ ಕಾರ್ಯದರ್ಶಿಗಳು ನಿಯಮ ಪಾಲಿಸದೆ, ಸಂಘದ ಏಳಿಗೆಗಾಗಿ ದುಡಿಯದೆ, ಸಂಘವನ್ನೇ ನೆಚ್ಚಿಕೊಂಡ ರೈತಾಪಿ ಜನರಿಗೆ ಅನುಕೂಲಮಾಡಿಕೊಡದೆ, ಸ್ವೇಚ್ಛೆಯಾಗಿ ವರ್ತಿಸುವುದನ್ನು ತಡೆಗಟ್ಟಿ, ಅವರು ಕಾನೂನು-ನಿಯಮಗಳನ್ನು ಅನುಸರಿಸಿ ಶಿಸ್ತು, ಸೌಜನ್ಯದಿಂದ ನಡೆದುಕೊಳ್ಳುವಂತೆ ಹಾಗೂ ಸಹಕಾರ ತತ್ವದ ಉದ್ದೇಶ ಸಫಲವಾಗುವ ರೀತಿಯಲ್ಲಿ ಸಾರ್ವಜನಿಕರಿಗೆ ಸಂಘಗಳು ಉಪಯುಕ್ತವಾಗುವಂತೆ ಮಾಡುವುದಕ್ಕಾಗಿ ಬ್ಯಾಂಕಿನ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು ಆಡಳಿತ ಮಂಡಳಿಯಾಗುಳ್ಳ ಈ ಸಿ.ಸಿ.ಎ.ಯನ್ನು ರಚಿಸಿದ್ದು ಅದನ್ನೇ ನಮ್ಮ ಬ್ಯಾಂಕಿಗೂ ಅಳವಡಿಸಿಕೊಂಡಿದೆಯೇ ಹೊರತು ಸಂಘಗಳ ಆಡಳಿತ ಮಂಡಳಿಗಳಲ್ಲಿ ಹಸ್ತಕ್ಷೇಪ ನಡೆಸುವುದು ಇದರ ಉದ್ದೇಶವಲ್ಲ.

ಸಿ.ಸಿ.ಎ. ಅಳವಡಿಸಿಕೊಂಡ ನಂತರ, ಯಾವ ಸಹಕಾರ ಸಂಘದ ವ್ಯವಹಾರವು ತೃಪ್ತಿಕರವಾಗಿಲ್ಲವೆಂದು ಸಾರ್ವಜನಿಕರಿಂದ ಆಹವಾಲುಗಳು ಬರುತ್ತಿದ್ದವೋ ಅಂತಹ ಸಂಸ್ಥೆಗಳ ಕಾರ್ಯದರ್ಶಿಗಳನ್ನು ಮಾತ್ರ ವರ್ಗ ಮಾಡಲಾಗಿದೆ. ಸಿ.ಸಿ.ಎ. ನಿಯಮದಂತೆ, ಸಂಘದ ಹಿತ ದೃಷ್ಟಿಯಿಂದ ಕಾರ್ಯದರ್ಶಿಗಳನ್ನು ವರ್ಗಮಾಡಬಹುದು ಅಥವಾ ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಿ ಶಿಕ್ಷೆಗೆ ಒಳಪಡಿಸಬಹುದು. ಈ ಪೈಕಿ, ಕಾರ್ಯದರ್ಶಿ ಸರಿಯಾಗಿ ಕೆಲಸ ನಿರ್ವಹಿಸದಿದ್ದಾಗ ಆತನಿಗೆ ಎಚ್ಚರಿಕೆ ಮೆಮೋ ನೀಡುವುದು, ದಂಡ ವಿಧಿಸುವುದು ಹಾಗೂ ಆತ ನಿಯಮಗಳನ್ನು ಉಲ್ಲಂಘಿಸಿದಾಗ ಅಥವಾ ಸಂಘದ ಹಣಕಾಸಿಗ ತೊಂದರೆ ಉಂಟಾದಾಗ ಆತನನ್ನು ಅಮಾನತ್ತಿನಲ್ಲಿಡುವ ಅಧಿಕಾರ ಸಂಘದ ಆಡಳಿತ ಮಂಡಳಿಗೆ ಇದೆ. ಸಹಕಾರ ಸಂಘಗಳಲ್ಲಿ ದುರುಪಯೋಗ ನಡೆದಲ್ಲಿ ಇಲಾಖೆಯ ಮುಖೇನ ನೇರ ಕ್ರಮ ತಡವಾಗುವ ಪ್ರಯುಕ್ತ ರಾಜ್ಯ ಸಹಕಾರ

(4ನೇ ಪುಟಕ್ಕೆ)

ಸಿ.ಸಿ.ಎ. ನಿಯಮಾವಳಿಗಳ ಜಾರಿ ಬಗ್ಗೆ
ಸಹಕಾರ ಕಾರ್ಯದರ್ಶಿಗಳ ಷರತ್ತುಗಳು

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಪ್ರಚಾರಪಡಿಸಿರುವ ಕಾಮನ್ ಕೇಡರ್ ಅಥಾರಿಟಿ (ಸಿ.ಸಿ.ಎ.) ನಿಯಮಾವಳಿಗಳ ಬಗ್ಗೆ ಶೃಂಗೇರಿ, ಕೊಪ್ಪ, ನ. ರಾ. ಪುರ ತಾ||ಗಳ ಸಹಕಾರ ಸಂಘಗಳ ಕಾರ್ಯದರ್ಶಿಗಳ ಸಭೆಯ (25-5-86) ತೀರ್ಮಾನಗಳು ಇಲ್ಲಿವೆ.

(1) ಈ ನಿಯಮಾವಳಿಗಳ ಜಾರಿಗೆ ಸಹಕಾರ ಸಂಘಗಳ ಆಡಳಿತ ಮಂಡಳಿಗಳವರ ಒಪ್ಪಿಗೆಯಿರಬೇಕು; ಎಲ್ಲಾ ಕಾರ್ಯದರ್ಶಿಗಳಿಗೂ ಏಕ ರೀತಿಯ ವೇತನ ಶ್ರೇಣಿಯನ್ನು ಮೊದಲು ನಿಗದಿ ಪಡಿಸಬೇಕು; ಕಾರ್ಮಿಕ ಕಾಯಿದೆಗೊಳಪಟ್ಟ ಎಲ್ಲಾ ನಿಯಮಗಳನ್ನೂ ಅಳವಡಿಸಬೇಕು; ಕಾರ್ಯದರ್ಶಿಗಳ ಒಪ್ಪಿಗೆಯೂ ಇರಬೇಕು—ಒಬ್ಬ ಕಾರ್ಯದರ್ಶಿ ನೇಮಕಗೊಂಡ ವೇಳೆ ಜಾರಿಯಲ್ಲಿದ್ದ ನಿಯಮಗಳೇ ಮುಂದೆಯೂ ಅನ್ವಯವಾಗ ಬೇಕು;

(2) ಶೇ. 90ರಷ್ಟು ಸಂಬಳವನ್ನು ಸಹಕಾರ ಸಂಘಗಳು ಸಿಸಿಎಗೆ ಕಟ್ಟಿರಲಿ ಕಟ್ಟದಿರಲಿ, ವೇತನವನ್ನು ಎಲ್ಲರಿಗೂ ಸಕಾಲದಲ್ಲಿ ನೀಡುವ ಖಾತರಿ ಬೇಕು;

ಸಹಕಾರ ಸಂಘಗಳ ನೌಕರರ ಸಂಘದ ಒಬ್ಬ ಸದಸ್ಯನನ್ನೂ, ಸ|| ಸಂಘಗಳ ಆಡಳಿತ ಮಂಡಳಿಗಳ ಇಬ್ಬರು ಸದಸ್ಯರನ್ನೂ ಸಿಸಿಎಗೆ ನೇಮಿಸಿಕೊಳ್ಳಬೇಕು;

(4) ಸಿಸಿಎ ಇಲಾಖಾಧಿಕಾರಿಗಳ ಹಿಡಿತದಲ್ಲಿರಬೇಕು, ಜಿಲ್ಲಾ ಬ್ಯಾಂಕ್‌ನ ಹಿಡಿತದಲ್ಲಲ್ಲ.

(5) ಕಾರ್ಯದರ್ಶಿಗಳ ಸರ್ವಿಸ್, ಗ್ರಾಚುಯಿಟಿ ಮುಂತಾದ ಸೌಲಭ್ಯಗಳ ಬಗ್ಗೆ ಸರ್ಕಾರದ ಖಾತರಿಯನ್ನು ಸಿಸಿಎ ಕಾನೂನಿಗೆ ಅಳವಡಿಸಿಕೊಳ್ಳ ಬೇಕು;

(6) ಕ್ರಮವಾದ ಯಾವುದೇ ವಿಚಾರಣೆಯಿಲ್ಲದೆ ಒಬ್ಬ ಕಾರ್ಯದರ್ಶಿಯನ್ನು ವಜಾ ಮಾಡಬಹುದೆನ್ನುವ ಕಾನೂನು ಬಾಹಿರವಾದ ನಿಯಮವನ್ನು ಹಾಲಿ ಸಿಸಿಎ ನಿಯಮಾವಳಿಯಿಂದ ತೆಗೆಯ ಬೇಕು;

(7) ಕಾರ್ಯದರ್ಶಿಗಳ ಮೇಲೆ ಆಡಳಿತ ಮಂಡಳಿ ಅಥವಾ ಇಲಾಖೆ—ಈ ಎರಡದರಲ್ಲಿ ಯಾರಾದರೊಬ್ಬರ ಹತೋಟಿ ಮಾತ್ರ ಇರಬೇಕು.

ಸೇವಾ ಮನೋಭಾವವುಳ್ಳ ನಿರುದ್ಯೋಗಿ ಯುವಜನರ ಗಮನಕ್ಕೆ !

ಸಾಗರ, ತೀರ್ಥಹಳ್ಳಿ, ಶಿಕಾರಿಪುರ, ಸೊರಬ ತಾಲ್ಲೂಕುಗಳನ್ನು ಕಾರ್ಯಕ್ಷೇತ್ರವನ್ನಾಗಿಟ್ಟುಕೊಂಡು, 'ಬಾಲಗೋಕುಲ', 'ಬಾಲ ಸಂಸ್ಕಾರ ಕೇಂದ್ರ', 'ಸಂಗೀತ-ನೃತ್ಯ ಶಿಕ್ಷಣ ಕೇಂದ್ರ', 'ಮಾತೃ ಮಂಡಳಿ' ಇತ್ಯಾದಿ ಸಂಸ್ಕಾರ-ತರಬೇತಿ ನೀಡುವ ಕಾರ್ಯ ನಡೆಸುತ್ತಿರುವ 'ಸೇವಾ ಸಾಗರ ಟ್ರಸ್ಟ್' ಸೇವಾ ಭಾವನೆಯುಳ್ಳ ಅರ್ಹ ವ್ಯಕ್ತಿಗಳನ್ನು ತನ್ನ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಯೋಜಿಸಿದೆ.

ಸಂಗೀತ, ನೃತ್ಯ, ಭರತನಾಟ್ಯ ಶಿಶು ಶಿಕ್ಷಣ (ಬಾಲಸೇವಿಕಾ), ಶಿಕ್ಷಣ (ಟಿ. ಸಿ. ಹೆಚ್.)—ಇವುಗಳಲ್ಲಿ ಆಸಕ್ತಿ ಇರುವ ತರಬೇತಿ ಪಡೆದವರು ಸೇವಾಸಾಗರವನ್ನು ಸಂಪರ್ಕಿಸಬಹುದಾಗಿದೆ. ಜೊತೆಗೇ ತನ್ನ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡಲು ಕನಿಷ್ಠ ಏಳನೇ ತರಗತಿ ಶಿಕ್ಷಣ ಪೂರೈಸಿದ ಯುವಕರ ಅಗತ್ಯ ಇದ್ದು ಆಸಕ್ತಿಯಿಂದ ಬರುವವರ ಕನಿಷ್ಠ ಜೀವನಾವಶ್ಯಕತೆ ಪೂರೈಸುವುದು ಅಥವಾ ವಸತಿಯೊಂದಿಗೆ ರೂ. 200 ರಷ್ಟು ಗೌರವ ಧನ ನೀಡುವುದೆಂದು ಸೇವಾ ಸಾಗರದ ಪ್ರಕಟಣೆ ತಿಳಿಸಿದೆ.

ಹೆಚ್ಚಿಗೆ ವಿವರಗಳನ್ನು ವೆ|| ಮಲೆನಾಡು ಸುದ್ದಿ ಸಂಸ್ಥೆ, ಭಂಡಿಗಡಿ-577 150, ಕೊಪ್ಪ ತಾ|| ಇವರಿಂದಲಾಗಲೀ ಅಥವಾ ಸೇವಾ ಸಾಗರದಿಂದಾಗಲೀ ತಿಳಿಯಬಹುದು.

'ವಿಐಪಿ'ಗಳ ದುಬಾರಿ ತೀರ್ಥಯಾತ್ರೆಗಳು

(ಎರಡನೇ ಪುಟದಿಂದ)

ಪೋಲೀಸ್ ಅಧಿಕಾರಿಗಳನ್ನು ಕೇಳಿದರೆ, "ಏನು ಮಾಡೋದು, ಅದು ನಮ್ಮ ಕರ್ತವ್ಯ. ಅವರಿಗೆ ರಕ್ಷಣೆ, ಗೌರವ, ಕೊಡೋದೇ ನಮ್ಮ ಕೆಲಸ" ಅಂತಾರೆ. ನಮ್ಮನ್ನಾಳುವ ಅಥವಾ ಸಮಾಜದ ನಾಯಕತ್ವ ವಹಿಸಿದ, ನಮ್ಮಂತೆಯೇ ಸಾಮಾನ್ಯರಾದ ಇವರುಗಳಿಗೆ ಅದೆಂಥ ಭಯ! ಈ ರಕ್ಷಣೆ-ಗೌರವಕ್ಕಿಂತ ಪ್ರೀತಿ-ಭದ್ರತೆ ಎಂಬುವುದಾಗಿದ್ದರೆ....? ಇವರುಗಳ ಮಜಕ್ಕಾಗಿ ಇವರಂತೆಯೇ ಮನುಷ್ಯರಾದ, ಏನೋ ಬದುಕಿಗಾಗಿ ನೌಕರಿ ಮಾಡುವ ಬಡವರ ಮೇಲೆ ಇಂಥ ದರ್ಪ-ದಬ್ಬಾಳಿಕೆ ಎಂಥ ಅನ್ಯಾಯ ಅನ್ನಿಸೋಲ್ವೆ?

ಗೌರವ, ರಕ್ಷಣೆ ಅಂತ ಪೋಲಿಸ್ನೋರ ಗೋಳು ಹೀಗಾದರೆ, ಇನ್ನು ತಾಲ್ಲೂಕಿನ ಯಜಮಾನ ಇಲಾಖೆಯಾದ ನಮ್ಮ ರೆವಿನ್ಯೂ ಇಲಾಖೆಯವರ ಪಾಡೇ ಇನ್ನೊಂದು ಬಗೆಯ ಅಧ್ಯಾಯ. (ಮುಂದಿನ ಸಂಚಿಕೆಗೆ)

ಸಮರ್ಪಕ ಕಾರ್ಯ ನಿರ್ವಹಣೆಗಾಗಿ ಸಿ. ಸಿ. ಎ:

(3ನೇ ಪುಟದಿಂದ)

ಸಂಘಗಳ ನಿಬಂಧಕರು ಸೂಕ್ತ ಕ್ರಮಕ್ಕಾಗಿ ಸಿ.ಸಿ.ಎ. ರಚಿಸಿದ್ದಾರೆಯೇ ಹೊರತು, ಸಂಘಗಳ ಮೇಲಿನ ವಿರಸಕ್ಕಲ್ಲ.

ಸಿ.ಸಿ.ಎ.ಯಿಂದ ವರ್ಗವಾಗಿರುವ ಕಾರ್ಯದರ್ಶಿಗಳು ವರ್ಗಾವಣೆ ಆಜ್ಞೆಯನ್ನು ಪಾಲಿಸುವುದು ಅವರ ಕರ್ತವ್ಯ. ಪಾಲಿಸದೆ ಹಟ ಹಿಡಿದರೆ ಅನಿವಾರ್ಯವಾಗಿ ನೇರ ಕ್ರಮ ಕೈಗೊಳ್ಳಬೇಕಾಗುತ್ತದೆಂದೂ ಎಚ್ಚರಿಸುತ್ತಿದ್ದೇವೆ. ಬ್ಯಾಂಕಿನಿಂದ ಕೊಡುವ ಸಾಲ ಸೌಲಭ್ಯಗಳು ಸರಿಯಾಗಿ ವಿತರಣೆಯಾಗಿ ಹಾಗೆಯೇ ವಾಪಸ್ ಬರಬೇಕಾಗಿರುವುದರಿಂದ, ಕಾರ್ಯದರ್ಶಿಗಳ ಕೆಲಸದ ಉಸ್ತುವಾರಿಯೂ ಬ್ಯಾಂಕಿನ ಜವಾಬ್ದಾರಿ ಆಗಿದೆ. ವರ್ಗಾವಣೆ ನಿಯಮವನ್ನು ಉಲ್ಲಂಘಿಸಿದ್ದಾರೆ ಎಂಬ ಕಾರಣಕ್ಕೆ, ಸಂಘಕ್ಕೆ ಮಂಜೂರಾದ ಸಾಲವನ್ನು ಬ್ಯಾಂಕ್ ಬಿಡುಗಡೆ ಮಾಡುತ್ತಿಲ್ಲ ಎಂಬ ಆರೋಪ ಸತ್ಯಕ್ಕೆ ದೂರವಾದುದು. ಈಗಾಗಲೇ ಬ್ಯಾಂಕಿನಿಂದ ಸುಮಾರು 3.75 ಕೋಟಿ ರೂ. ವಿತರಿಸಿದ್ದು ಇನ್ನೂ 50 ಲಕ್ಷ ರೂ. ಸಾಲ ಹಂಚುವ ಗುರಿಯನ್ನು ಬ್ಯಾಂಕು ಹೊಂದಿದೆ.

—**ಕೆ. ಪು. ನಿಂಗೇಗೌಡ,**
ವ್ಯವಸ್ಥಾಪಕ ನಿರ್ದೇಶಕರು,
ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಲಿ., ಚಿಕ್ಕಮಗಳೂರು.

ಸಾಹಿತ್ಯಾಸಕ್ತರಿಗೊಂದು ಸರಳ-ಸುಂದರ ಸಮಾರಂಭ:

ವಸಂತ ಸಾಹಿತ್ಯೋತ್ಸವ, ಶಿಕ್ಷಕರ ದಿನ

ಬಾಳೆಹೊನ್ನೂರು: ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನ.ರಾ. ಪುರ ತಾ|| ಮಟ್ಟದ 'ವಸಂತ ಸಾಹಿತ್ಯೋತ್ಸವ'ವು ಸೆ. 5ರಂದು ಇಲ್ಲಿ ಶಿಕ್ಷಕರ ದಿನಾಚರಣೆ ಮತ್ತು ನಿವೃತ್ತ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ನೆರವೇರಿತು.

ಈ ಉತ್ಸವದ ಅಂಗವಾಗಿ, "ಸಾಹಿತ್ಯ ಕ್ಷೇತ್ರಕ್ಕೆ ಜಾನಪದದ ಕೊಡುಗೆ" ವಿಷಯವಾಗಿ ಟಿ.ಆರ್. ನಾಗಪ್ಪ ಗೌಡ ಅವರು ಜಾನಪದದ ಹಾಡುಗಳನ್ನು ಹಾಡುವುದರೊಂದಿಗೆ ಹಲವು ಉದಾಹರಣೆ ಸಹಿತ ವಿಶ್ಲೇಷಿಸಿದರು. "ಸಾಹಿತ್ಯ ಕ್ಷೇತ್ರಕ್ಕೆ ವನ ಮತ್ತು ವನ್ಯ ಜೀವಿಗಳ ಕೊಡುಗೆ" ಎಂಬ ವಿಚಾರವಾಗಿ ವೀರಪ್ಪ ದೇವರು ಮೌಲಿಕವಾದ ಉಪನ್ಯಾಸ ನೀಡಿದರು.

ಡಾ|| ಎಸ್. ರಾಧಾಕೃಷ್ಣನ್ನರ ಬಗ್ಗೆ ಕುಮಾರಿ ಸ್ಟೆಲ್ಲಾ ಓ.ಡಿ. ಮಾತನಾಡಿದರು. ಮುಖ್ಯ ಅತಿಥಿ ಬಿ. ಎಸ್. ವಿದ್ಯಾನಂದ ಭಟ್ ರಾಧಾಕೃಷ್ಣನ್ನರ ಸ್ಮರಣೆಯೊಂದಿಗೆ, ವಿದ್ಯಾರ್ಥಿಗಳನ್ನು ಸ್ವಚ್ಛ ನಿರ್ಮಲ ದೇಶಭಕ್ತರನ್ನಾಗಿ ಮಾಡುವಂತೆ ಶಿಕ್ಷಕರಿಗೆ ಕರೆ ನೀಡಿದರು. ಅವರು ಮುಂದುವರಿದು, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳನ್ನು ಹಳ್ಳಿಗಳ ಮಟ್ಟಕ್ಕೆ ಕೊಂಡೊಯ್ಯಲು ನ. ರಾ. ಪುರ ತಾ|| ಪ್ರತಿನಿಧಿ ಎಂ. ಐ. ಶ್ರೀನಿವಾಸ ಮೂರ್ತಿ ಮತ್ತು ಕೊಪ್ಪ ತಾ|| ಪ್ರತಿನಿಧಿ ಹ. ಪ. ಗಣಪತಿ ಪ್ರಭುಗಳಂಥವರು ನಿಸ್ಪೃಹವಾಗಿ ಸೇವೆ ಸಲ್ಲಿಸುತ್ತಿದ್ದಾರೆ ರಾಜಕೀಯಕ್ಕೆ ಸಿಗುವ ಪ್ರೋತ್ಸಾಹದ ಶೇಕಡಾ ಒಂದಂಶ ಪ್ರೋತ್ಸಾಹವಾದರೂ ಇಂಥವರಿಗೆ ಸಿಕ್ಕಲ್ಲಿ ಸಾಹಿತ್ಯ ಪರಿಷತ್ತಿನ ಹೆಸರು ಹಳ್ಳಿ ಹಳ್ಳಿಗಳಲ್ಲಿ ಶಾಶ್ವತಗೊಳ್ಳುತ್ತದೆ ಎಂದರು.

ನಿವೃತ್ತ ಶಿಕ್ಷಕರಾದ ಶ್ರೀಮತಿ ಸುಶೀಲಾ ಬಾಯಿ, ಟಿ. ಪಿ. ರಾಮರಾವ್, ಎ. ಆರ್. ನಾಗೇಶ ರಾವ್ ಮತ್ತು ನಸೀರುದ್ದೀನ್ ಇವರುಗಳನ್ನು ರೋಟರಿ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ರಾಮರಾವ್ ಮಾತನಾಡಿದರು. ರೋಟರಿ ಅಧ್ಯಕ್ಷ ಮಮ್ತಾಜ್ ಹುಸೇನ್ ಶಿಕ್ಷಕರಿಗೆ ಶುಭ ಕೋರಿದರು.

ಪರಮೇಶ್ವರಪ್ಪ ಅಂಟಿಗೆ-ಪಂಟಿಕೆ ಪದಗಳನ್ನು ಹಾಡಿದರು ಕ.ಸಾ.ಪ. ಪ್ರಶ್ನಾವಳಿ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಕೆ.ಜಿ. ಕೃಷ್ಣಯ್ಯ ಗೌಡ ಬಹುಮಾನ ವಿತರಿಸಿದರು. ಪ್ರಶ್ನಾವಳಿಯ ಪ್ರಶ್ನೆ - ಉತ್ತರಗಳನ್ನು ನಟರಾಜ್ ನೀಡಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿ. ಟಿ. ಮಂಜಪ್ಪ ಗೌಡರು ತಮ್ಮ ಊರಾದ ಬನ್ನೂರಿನಲ್ಲೂ ಪರಿಷತ್ತಿನ ಕಾರ್ಯಕ್ರಮ ನಡೆಸಲು ತಮ್ಮ ಪೂರ್ಣ ಸಹಕಾರದ ಭರವಸೆಯೊಂದಿಗೆ ಆಹ್ವಾನ ನೀಡಿದರು.

ಕೆ.ಎನ್. ಮಂಜುನಾಥ್ ಸ್ವಾಗತಿಸಿದರು. ಎಸ್. ಜಿ. ಕೃಷ್ಣಮೂರ್ತಿ ಕಾರ್ಯಕ್ರಮ ನಿರ್ದೇಶಿಸಿದರು. ಎಂ.ಐ. ಶ್ರೀನಿವಾಸ ಮೂರ್ತಿ ವಂದಿಸಿದರು.

ವಿದ್ಯಾವಂತ ನಿರುದ್ಯೋಗಿಗಳಿಗೆ

ಸ್ವಯಂ ಉದ್ಯೋಗ ಯೋಜನೆ

ಸಾಲ ಸೌಲಭ್ಯ : ಕೈಗಾರಿಕೆಗೆ 35,000 ರೂ., ಸೇವಾ ಉದ್ಯಮಗಳಿಗೆ 25,000 ರೂ.; ವ್ಯಾಪಾರಕ್ಕೆ 15,000 ರೂ. ಇದರಲ್ಲಿ ಶೇ. 25 ಭಾಗ ಸಬ್ಸಿಡಿ. ವಯೋಮಿತಿ 18ರಿಂದ 35 ವರ್ಷ. ವಿದ್ಯಾರ್ಹತೆ : ಎಸ್ಸೆಸ್ಸೆಲ್ಸಿ ಮತ್ತು ಮೇಲ್ಪಟ್ಟು. ಸ್ತ್ರೀಯರಿಗೆ ಮತ್ತು ತಾಂತ್ರಿಕ ಶಿಕ್ಷಣ ಪಡೆದವರಿಗೆ ಆದ್ಯತೆ. (ಐ.ಟಿ.ಐ. ತೇರ್ಗಡೆಯಾದವರೂ ಸಹ.)

ವರಮಾನ ಮಿತಿ : ವಾರ್ಷಿಕ 10,000 ರೂ. ಮೀರಿರಬಾರದು.

ಅರ್ಜಿ : ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿ, ಉಪವಿಭಾಗ ಪ|| ನಿ|| ಕಚೇರಿ ಅಥವಾ ತಾ|| ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಅರ್ಜಿ ಫಾರಂ ಪಡೆದು, **ದ್ವಿಪ್ರತಿ**ಯಲ್ಲಿ ಭರ್ತಿ ಮಾಡಿ **ತಾ|| 30.9.86ರೊ**ಳಗೆ ಮೇಲ್ಕಂಡ ಯಾರಾದರೊಬ್ಬ ಅಧಿಕಾರಿಗೆ ಸಲ್ಲಿಸಬೇಕು.

ಅರ್ಜಿಯಲ್ಲಿ ವಯಸ್ಸು, ವಿದ್ಯಾರ್ಹತೆ, ಜಾತಿ, ತಂದೆ / ಪೋಷಕರ ವಾರ್ಷಿಕ ವರಮಾನ, ಬೇಕಾಗುವ ಯಂತ್ರೋಪಕರಣಗಳ ವಿವರ. ಅಂದಾಜು ಹಣ ಮೊದಲಾದ ವಿವರ ಹಾಗೂ ಅಗತ್ಯವಿರುವ ಪ್ರಮಾಣ ಪತ್ರಗಳನ್ನು ಒದಗಿಸಬೇಕು. ವರಮಾನದ ಪ್ರಮಾಣ ಪತ್ರ (5 ರೂ ಛಾಪಾ ಕಾಗದದಲ್ಲಿ), ಪ. ಜಾತಿ/ಪ ಬುಡಕಟ್ಟಿಗೆ ಸೇರಿದ್ದರೆ ಆ ಬಗ್ಗೆ 5 ರೂ. ಛಾಪಾ ಕಾಗದದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು. ಹಿಂದೆ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಅರ್ಜಿ ಅಪೂರ್ಣವಾಗಿರಬಾರದು.

ಸಂದರ್ಶನದ ಮೂಲಕ ಅರ್ಹ ಅಭ್ಯರ್ಥಿಗಳ ಆಯ್ಕೆ ನಡೆಯುತ್ತದೆ. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಯಾವುದೇ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಚಿಕ್ಕಮಗಳೂರು ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘ.

ಪ್ರ ಕ ಟ ಣೆ

ತಾ|| 7-9-86ರಂದು ನಡೆಯಬೇಕಿದ್ದ ನಮ್ಮ ಸಂಘದ ಸಹಾಯಾರ್ಥ ಅದೃಷ್ಟ ಬಹುಮಾನ ಯೋಜನೆಯ ಡ್ರಾವನ್ನು ಅನಿವಾರ್ಯ ಕಾರಣದಿಂದ ತಾ| 21-9-86ಕ್ಕೆ ಮುಂದೂಡಿದೆ. ಅಭಿಮಾನಿಗಳು ಗಮನಿಸಿ ಸಹಕರಿಸಬೇಕಾಗಿ ವಿನಂತಿ.

ಕಾರ್ಯದರ್ಶಿ

ಏಲಕ್ಕಿ ಬೆಳೆಗಾರರ ಪ್ರಧಾನ ಗಮನಕ್ಕೆ

ಏಲಕ್ಕಿ ಮಾರುಕಟ್ಟೆಯನ್ನು ನಿಯಂತ್ರಿಸಲು ಹಾಗೂ ಏಲಕ್ಕಿಗೆ ಉತ್ತಮ ಬೆಲೆಯನ್ನು ದೊರಕಿಸಿಕೊಡಲು ಏಲಕ್ಕಿ ಮಂಡಳಿಯು ಏಲಕ್ಕಿ ಹರಾಜು ಕೇಂದ್ರಗಳನ್ನು ಕರ್ನಾಟಕದ ಪ್ರಮುಖ ಮಾರುಕಟ್ಟೆಗಳಾದ **ಸಕಲೇಶಪುರ** ಮತ್ತು **ಮಡಿಕೇರಿಯಲ್ಲಿ** ಪ್ರಾರಂಭಿಸಿದೆ.

ಪ್ರತಿ ಸೋಮವಾರ ಸಕಲೇಶಪುರದಲ್ಲೂ ಮತ್ತು **ಪ್ರತಿ ಬುಧವಾರ ಮಡಿಕೇರಿಯಲ್ಲೂ** ಏಲಕ್ಕಿ ಹರಾಜನ್ನು ನಡೆಸಲಾಗುತ್ತಿದೆ. ಮಂಗಳೂರು, ಬೆಂಗಳೂರು ಮತ್ತು ಇತರ ಕೇಂದ್ರಗಳ ವ್ಯಾಪಾರಸ್ಥರು ಹಾಗೂ ರಫ್ತುದಾರರು ಈ ಹರಾಜುಗಳಲ್ಲಿ ಭಾಗವಹಿಸುತ್ತಾರೆ.

ಕಡಿಮೆ ಖರ್ಚಿನಲ್ಲಿ (1% ಕಮಿಷನ್ ಮಾತ್ರ) ಬೆಳೆಗಾರರ ಏಲಕ್ಕಿಯನ್ನು ಮಂಡಳಿಯ ಹರಾಜು ಕೇಂದ್ರಗಳಲ್ಲಿ ಮಾರಾಟ ಮಾಡಿ ಕೊಡಲಾಗುತ್ತದೆ. **ಏಲಕ್ಕಿಯ ಪೂರ್ಣ ಕ್ರಯವನ್ನು ಆ ದಿನವೇ ಏಲಕ್ಕಿ ಬೆಳೆಗಾರರಿಗೆ ಕೊಡುವ ಏರ್ಪಾಡನ್ನೂ ಸಹಾ ಮಾಡಲಾಗಿದೆ.**

ಏಲಕ್ಕಿ ಮಾರುಕಟ್ಟೆಯನ್ನು ನಿಯಂತ್ರಿಸುವ ಹಾಗೂ **ಉತ್ತಮವಾದ ಬೆಲೆಯನ್ನು ದೊರಕಿಸಿಕೊಡುವ** ಈ ಸಾಧನೆಗೆ ಏಲಕ್ಕಿ ಬೆಳೆಗಾರರ, ವ್ಯಾಪಾರದಾರರ ಹಾಗೂ ಏಲಕ್ಕಿ ಉದ್ಯಮದಲ್ಲಿರುವ ಪ್ರತಿಯೊಬ್ಬರ ಪೂರ್ಣ ಸಹಕಾರವನ್ನು ಈ ಮೂಲಕ ಕೋರಲಾಗಿದೆ.

ಬೆಳೆಗಾರರು ತಮ್ಮ ಏಲಕ್ಕಿಯನ್ನು ಮಾರಲು ಮಧ್ಯವರ್ತಿಗಳ ಮೊರೆ ಹೋಗದೆ ಏಲಕ್ಕಿ ಮಂಡಳಿಯ ಹರಾಜು ಕೇಂದ್ರಗಳ ಮೂಲಕ ಮಾರಾಟ ಮಾಡುವುದರಿಂದ ಅವರಿಗೆ ಸೂಕ್ತ ಬೆಲೆ ದೊರೆಯುವುದು. ಬೆಳೆಗಾರರು ಮಂಡಳಿಯ ಹರಾಜು ಕೇಂದ್ರಕ್ಕೆ ಏಲಕ್ಕಿಯನ್ನು ತರುವ ಮುನ್ನ ಒಣಗಿಸಿ, ವಿಂಗಡಣೆ ಮಾಡಿ ತರುವುದರಿಂದ ಉತ್ತಮ ಬೆಲೆಯನ್ನು ಪಡೆಯಬಹುದು.

ಹರಾಜು ದಿನದಂದು ಹರಾಜನ್ನು ಸಕಾಲದಲ್ಲಿ ನಡೆಸಲು ಹಾಗೂ ಹೆಚ್ಚಿನ ಒತ್ತಡವನ್ನು ನಿಯಂತ್ರಿಸಲು ಅನುಕೂಲವಾಗುವಂತೆ ಏಲಕ್ಕಿಯನ್ನು ಮುಂಚಿತವಾಗಿಯೇ ತಂದು ಕೊಡಬೇಕೆಂದು ಕೋರಲಾಗಿದೆ. ಏಲಕ್ಕಿಯನ್ನು ವಾರದ ಎಲ್ಲಾ ದಿನಗಳಲ್ಲೂ **ಸ್ವೀಕರಿಸಲಾಗುವುದು.**

ಹೆಚ್ಚಿನ ಮಾಹಿತಿಗಳಿಗಾಗಿ ಇಂದೇ ಮಂಡಳಿಯ ಹರಾಜು ಕೇಂದ್ರಕ್ಕೆ ಭೇಟಿ ಕೊಡಬೇಕಾಗಿ ಕೋರಲಾಗಿದೆ.

—ಏಲಕ್ಕಿ ಮಂಡಳಿ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ